# ಕನ್ನಡ ವಿಶ್ವವಿದ್ಯಾಲಯ, ಹಂಪಿ
## ವಿದ್ಯಾರಣ್ಯ-೫೮೩ ೨೭೬

## ನವೆಂಬರ್ ೦೯, ೨೦೨೦ರ ಸೋಮವಾರದಂದು ನಡೆದ ಕಾರ್ಯಕಾರಿ ಸಮಿತಿ ೨೦೫ನೇ (ವಿಶೇಷ) ಸಭೆಯ ನಡವಳಿಗಳು

**ಸಭೆಯಲ್ಲಿ ಉಪಸ್ಥಿತರಿದ್ದವರು:**

| | |
|---|---|
| ೦೧. ಡಾ. ಸ.ಚಿ.ರಮೇಶ, ಮಾನ್ಯ ಕುಲಪತಿಗಳು, ಕ.ವಿ.ಹಂ. | : ಅಧ್ಯಕ್ಷರು |
| ೦೨. ಪ್ರೊ. ಹೆಚ್.ಎಸ್. ರಘುನಾಥ, ಶಿವಮೊಗ್ಗ | : ಸದಸ್ಯರು |
| ೦೩. ಪ್ರೊ. ಹೆಚ್.ಎಂ. ಚನ್ನಪ್ಪಗೋಳ, ಬೆಳಗಾವಿ | : ಸದಸ್ಯರು |
| ೦೪. ಪ್ರೊ. ಜಿ.ಸಿ. ರಾಜಣ್ಣ, ಮೈಸೂರು | : ಸದಸ್ಯರು |
| ೦೫. ಶ್ರೀಮತಿ ನಯನಾ ಎಸ್., ಬೆಂಗಳೂರು | : ಸದಸ್ಯರು |
| ೦೬. ಶ್ರೀ ಪ್ರಶಾಂತ್ ಭೀಮಯ್ಯ, ಮಡಿಕೇರಿ | : ಸದಸ್ಯರು |
| ೦೭. ಶ್ರೀ ಜೈಭೀಮ್, ಕಲಬುರಗಿ | : ಸದಸ್ಯರು |
| ೦೮. ಡಾ. ವೈ.ಎಂ. ಭಜಂತ್ರಿ | : ಸದಸ್ಯರು |
| ೦೯. ಶ್ರೀ ಸಮಿಉಲ್ಲಾ ಖಾನ್, ಬೆಂಗಳೂರು | : ಸದಸ್ಯರು |
| ೧೦. ಡಾ. ವೀರೇಶ್ ಬಡಿಗೇರ, ಡೀನ್, ಭಾಷಾ ನಿಕಾಯ, ಕವಿಹಂ | : ಸದಸ್ಯರು |
| ೧೧. ಡಾ. ಸಿ.ಆರ್. ಗೋವಿಂದರಾಜು, ಡೀನ್, ಸಮಾಜ ವಿಜ್ಞಾನಗಳ ನಿಕಾಯ, ಕವಿಹಂ | : ಸದಸ್ಯರು |
| ೧೨. ಡಾ. ಕೆ.ರವೀಂದ್ರನಾಥ, ಡೀನ್, ಲಲಿತಕಲೆಗಳ ನಿಕಾಯ, ಕವಿಹಂ | : ಸದಸ್ಯರು |
| ೧೩. ಡಾ. ಮಾಧವ ಪೆರಾಜೆ, ವಿಜ್ಞಾನಗಳ ನಿಕಾಯ, ಕವಿಹಂ | : ಸದಸ್ಯರು |
| ೦೬. ಡಾ. ರಮೇಶ ನಾಯಕ, ಹಣಕಾಸು ಅಧಿಕಾರಿಗಳು, ಕವಿಹಂ | : ವಿಶೇಷ ಆಹ್ವಾನಿತರು |
| ೧೪. ಡಾ. ಎ. ಸುಬ್ಬಣ್ಣ ರೈ, ಕುಲಸಚಿವರು, ಕವಿಹಂ | : ಪದನಿಮಿತ್ತ ಕಾರ್ಯದರ್ಶಿ |

**ಸಭೆಯಲ್ಲಿ ಅನುಪಸ್ಥಿತರಿದ್ದವರು:**

| | |
|---|---|
| ೦೧. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| ೦೨. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಣಕಾಸು ಇಲಾಖೆ, ಬೆಂಗಳೂರು | : ಸದಸ್ಯರು |
| ೦೩. ಸರ್ಕಾರದ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | : ಸದಸ್ಯರು |
| ೦೪. ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | : ಸದಸ್ಯರು |
| ೦೫. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | : ಸದಸ್ಯರು |

ಸಭೆಯ ಆರಂಭದಲ್ಲಿ ಕುಲಸಚಿವರು ಕಾರ್ಯಕಾರಿ ಸಮಿತಿ ಸದಸ್ಯರನ್ನು ಮತ್ತು ಅಧ್ಯಕ್ಷರನ್ನು ಹಾಗೂ ಸಮಾಜ ವಿಜ್ಞಾನಗಳ ನಿಕಾಯದ ಡೀನರಾಗಿ ನೂತನವಾಗಿ ನಿಯೋಜನೆಗೊಂಡ ಡಾ. ಸಿ.ಆರ್. ಗೋವಿಂದರಾಜು ಅವರನ್ನು ಸಭೆಗೆ ಸ್ವಾಗತಿಸಿದರು. ನಂತರ ಸಭೆಯ ಎಲ್ಲಾ ಸದಸ್ಯರು ಸದರಿ ಡೀನರಿಗೆ ಅಭಿನಂದನೆಗಳನ್ನು ಸಲ್ಲಿಸಿದರು.

**ಮಂಡಿಸಲಾದ ಕಾರ್ಯಸೂಚಿಯನ್ನು ಕುರಿತು ಚರ್ಚಿಸಿ ಈ ಕೆಳಕಂಡ ನಿರ್ಣಯಗಳನ್ನು ಕೈಗೊಳ್ಳಲಾಯಿತು.**

**ವಿಷಯ** : ದಿನಾಂಕ ೦೯.೧೦.೨೦೨೦ರಂದು ನಡೆದ ಕಾರ್ಯಕಾರಿ ಸಮಿತಿಯ ೨೦೪ನೇ ಸಭೆಯ ನಡವಳಿಗಳ ಸ್ಥಿರೀಕರಣ ಹಾಗೂ ಅನುಮೋದನೆ ನೀಡುವ ಕುರಿತು. **(ಅನುಬಂಧ-೦೧)**

**ನಿರ್ಣಯ:** ದಿನಾಂಕ ೦೯.೧೦.೨೦೨೦ರಂದು ನಡೆದ ಕಾರ್ಯಕಾರಿ ಸಮಿತಿ ೨೦೪ನೇ ಸಭೆಯ ನಡವಳಿಗಳನ್ನು ಈ ಕೆಳಗಿನಂತೆ ಪರಿಷ್ಕರಿಸಲು ಸೂಚಿಸಿ ಸಭೆ ಅನುಮೋದನೆ ನೀಡಿತು.

೨೦೪ನೇ ಕಾರ್ಯಕಾರಿ ಸಮಿತಿ ಸಭೆ ವಿಷಯ ೨೦೪.೦೭ರ ಸಂಬಂಧ ನೇಮಿಸಿದ್ದ ಸಮಿತಿಯು ಮುಂದುವರೆದು, ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಜೈಭೀಮ್ ಆರ್. ಕಟ್ಟಿ ಅವರ ದಿನಾಂಕ ೨೦.೦೩.೨೦೨೦ರ ಪತ್ರದಲ್ಲಿ ಪ್ರಸ್ತಾಪಿಸಿದ ವಿಷಯಗಳಿಗೆ ವಿಶ್ವವಿದ್ಯಾಲಯವು ದಿನಾಂಕ ೦೯.೦೭.೨೦೨೦ರಂದು ಒದಗಿಸಿರುವ ಮಾಹಿತಿಯನ್ನು ವಿಶ್ವವಿದ್ಯಾಲಯದ ಅಧಿನಿಯಮ ಹಾಗೂ ಪರಿನಿಯಮಗಳಲ್ಲಿ ಉಪಬಂಧಿಸಿದ ನಿಯಮಗಳನುಸಾರ ಪರಿಶೀಲಿಸಲು ಸಭೆಯು ಅನುಮೋದನೆ ನೀಡಿತು.

**ವಿಷಯ** : ದಿನಾಂಕ ೦೯.೧೦.೨೦೨೦ರಂದು ನಡೆದ ಕಾರ್ಯಕಾರಿ ಸಮಿತಿಯ ೨೦೪ನೇ ಸಭೆಯ ನಡವಳಿಗಳ ಅನುಪಾಲನಾ ವರದಿಗೆ ಅನುಮೋದನೆ ನೀಡುವ ಕುರಿತು. **(ಅನುಬಂಧ-೦೨)**

**ನಿರ್ಣಯ:** ದಿನಾಂಕ ೦೯.೧೦.೨೦೨೦ರಂದು ನಡೆದ ಕಾರ್ಯಕಾರಿ ಸಮಿತಿಯ ೨೦೪ನೇ ಸಭೆಯ ನಡವಳಿಗಳ ಸ್ಥಿರೀಕರಣಕ್ಕೆ ಸಂಬಂಧಿಸಿದಂತೆ ತಿದ್ದುಪಡಿ ಮಾಡಿಕೊಳ್ಳಲಾದ ವಿಷಯವನ್ನು ಅಳವಡಿಸಿಕೊಳ್ಳಲು ಸೂಚಿಸಿ ಅನುಪಾಲನಾ ವರದಿಗೆ ಅನುಮೋದನೆ ನೀಡಿತು.

೨೦೫.೧೧ ದಿನಾಂಕ ೧೦.೧೧.೨೦೨೦ರಂದು ನಡೆಯಲಿರುವ ೨೮ನೇ ನುಡಿಹಬ್ಬ(ಘಟಿಕೋತ್ಸವ)ದಲ್ಲಿ ವಿದ್ಯಾರ್ಥಿಗಳು ಪಡೆಯುವ ವಿವಿಧ ಕೋರ್ಸ್‌ಗಳ ಪದವಿಗಳಿಗೆ ಸಭೆ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ವಿಷಯವನ್ನು ಪರಿಶೀಲಿಸಿದ ಸಭೆಯು ಈ ಕೆಳಗಿನ ಒಟ್ಟು ೨೫೭ ವಿವಿಧ ಕೋರ್ಸ್‌ಗಳ ಪದವಿಗಳಿಗೆ ಅನುಮೋದನೆ ನೀಡಿತು.

೧. ಡಿ.ಲಿಟ್-೦೨
೨. ಪಿಎಚ್.ಡಿ.-೭೪
೩. ಎಂ.ಫಿಲ್-೩೨
೪. ಬಿ. ಮ್ಯೂಜಿಕ್-೧೩
೫. ಎಂ.ಎ.ಪಿಎಚ್.ಡಿ. (ಕನ್ನಡ ಸಾಹಿತ್ಯ) ಸಂಯೋಜಿತ ಪದವಿ-೨೧
೬. ಎಂ.ಎ.ಪಿಎಚ್.ಡಿ. (ಮಹಿಳಾ ಅಧ್ಯಯನ) ಸಂಯೋಜಿತ ಪದವಿ-೦೨
೭ ಎಂ.ಎ.ಪಿಎಚ್.ಡಿ. (ಇತಿಹಾಸ ಮತ್ತು ಪುರಾತತ್ವ) ಸಂಯೋಜಿತ ಪದವಿ-೧೨
೮. ಎಂ.ಎ.ಪಿಎಚ್.ಡಿ. (ಸಮಾಜಶಾಸ್ತ್ರ) ಸಂಯೋಜಿತ ಪದವಿ-೧೨
೯. ಎಂ.ಎ.ಪಿಎಚ್.ಡಿ. (ಗ್ರಾಮೀಣಾಭಿವೃದ್ಧಿ) ಸಂಯೋಜಿತ ಪದವಿ-೦೭
೧೦. ಎಂ.ಎ. ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ-೦೩
೧೧. ಎಂ.ವಿ.ಎ. (ಚಿತ್ರಕಲೆ)-೦೮
೧೨. ಎಂ. ಮ್ಯೂಜಿಕ್-೦೯
೧೩. ನಾಟಕ ಡಿಪ್ಲೊಮಾ-೩೩
೧೪. ಪಂಚಾಯತ್‌ರಾಜ್ ಡಿಪ್ಲೊಮಾ-೦೭
೧೫. ಕನ್ನಡ ಭಾಷಾಧ್ಯಯನ ಸ್ನಾತಕೋತ್ತರ ಡಿಪ್ಲೊಮಾ-೦೬
೧೬. ಭಾಷಾಂತರ ಸ್ನಾತಕೋತ್ತರ ಡಿಪ್ಲೊಮಾ-೦೭
೧೭. ಪತ್ರಿಕೋದ್ಯಮ ಸ್ನಾತಕೋತ್ತರ ಡಿಪ್ಲೊಮಾ-೦೬
೧೮. ಶಾಸನಶಾಸ್ತ್ರ ಸ್ನಾತಕೋತ್ತರ ಡಿಪ್ಲೊಮಾ - ೦೩

೨೦೫.೦೨ ದೂರಶಿಕ್ಷಣ ನಿರ್ದೇಶನಾಲಯ ಹಾಗೂ ಚಿತ್ರಕಲಾ ವಿದ್ಯಾಲಯಗಳ ನಿರ್ವಹಣ ಕೇಂದ್ರಗಳ ವಿವಿಧ ಪದವಿ ಹಾಗೂ ಡಿಪ್ಲೊಮಾ ಕೋರ್ಸ್‌ಗಳಿಗೆ ಅನುಮೋದನೆ ನೀಡುವ ಕುರಿತು.

ನಿರ್ಣಯ : **ದೂರಶಿಕ್ಷಣ ನಿರ್ದೇಶನಾಲಯ ಮತ್ತು ಚಿತ್ರಕಲೆ ವಿದ್ಯಾಲಯಗಳ ನಿರ್ವಹಣಾ ಕೇಂದ್ರದ ಈ ಕೆಳಗಿನ ಪದವಿಗಳಿಗೆ ಅನುಮೋದನೆ ನೀಡಿತು.**

**ಅ. ದೂರಶಿಕ್ಷಣ ನಿರ್ದೇಶನಾಲಯ ಒಟ್ಟು ೬೪೬ ಪದವಿ**

೧. ಎಂ.ಎ. ಕನ್ನಡ ಅಂತಿಮ - ೨೦೩
೨. ಎಂ.ಎ. ಚರಿತ್ರೆ ಅಂತಿಮ - ೨೨೦
೨. ಎಂ.ಎ. ಪತ್ರಿಕೋದ್ಯಮ - ೩೭
೪. ಎಂ.ಎ. ಸಮಾಜಶಾಸ್ತ್ರ - ೧೧೬
೫. ಪುರಾತತ್ವ ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಡಿಪ್ಲೊಮಾ - ೨೨
೬. ಪತ್ರಿಕೋದ್ಯಮ ಡಿಪ್ಲೊಮಾ - ೨೬
೭ ನಾಟಕ ಕಲೆ ಡಿಪ್ಲೊಮಾ - ೧೦
೮. ಕನ್ನಡ ಸಾಹಿತ್ಯ ಡಿಪ್ಲೊಮಾ - ೦೨
೯. ಶಾಸನಶಾಸ್ತ್ರ ಡಿಪ್ಲೊಮಾ - ೧೦

**ಆ. ಚಿತ್ರಕಲಾ ವಿದ್ಯಾಲಯಗಳ ನಿರ್ವಹಣಾ ಕೇಂದ್ರದ ಒಟ್ಟು ೩೭೪ ಪದವಿ**

೧. ಬ್ಯಾಚುಲರ್ ಆಫ್ ವಿಜ್ಯುವಲ್ ಆರ್ಟ್, ಚಿತ್ರಕಲೆ ಅಂತಿಮ - ೨೬೭
೨. ಬ್ಯಾಚುಲರ್ ಆಫ್ ವಿಜ್ಯುವಲ್ ಆರ್ಟ್, ಅನ್ವಯಿಕ ಕಲೆ ಅಂತಿಮ - ೧೯
೩. ಬ್ಯಾಚುಲರ್ ಆಫ್ ವಿಜ್ಯುವಲ್ ಆರ್ಟ್, ಚಿತ್ರಕಲೆ ಅಂತಿಮ - ೪
೪. ೫ನೇ ವರ್ಷದ ವಿಶೇಷ ಪ್ರಾವೀಣಿತಿ ಡಿಪ್ಲೊಮಾ ಕೋರ್ಸ್ - ೮೪

**ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು**

೨೦೫.೦೩ ೨೦೧೯-೨೦ನೇ ಸಾಲಿನ ಮೂರನೇ ಮತ್ತು ನಾಲ್ಕನೇ ತ್ರೈಮಾಸಿಕ ಹಣಕಾಸು ಸಮಿತಿ ಸಭೆಯ ನಡವಳಿಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ನಡವಳಿಗಳನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

೨೦೫.೦೪ ಕನ್ನಡ ವಿಶ್ವವಿದ್ಯಾಲಯದ ಬೆಳಗಾವಿ ವಿಸ್ತರಣಾ ಕೇಂದ್ರದಲ್ಲಿ ಕನ್ನಡ ಸ್ನಾತಕೋತ್ತರ ಪದವಿ (ಎಂ.ಎ.) ಕೋರ್ಸ್ ಹಾಗೂ ದೇವದುರ್ಗ ವಿಸ್ತರಣಾ ಕೇಂದ್ರದಲ್ಲಿ ಕನ್ನಡ ಮತ್ತು ಗ್ರಾಮೀಣಾಭಿವೃದ್ಧಿ (ಎಂ.ಎ.) ಸ್ನಾತಕೋತ್ತರ ಪದವಿ ಕೋರ್ಸ್‌ಗಳನ್ನು ನಡೆಸಲು ಅನುಮತಿ ಕೋರಿ ನಿರ್ದೇಶಕರು ಅಧ್ಯಯನಾಂಗ ಇವರು ದಿನಾಂಕ ೦೭.೧೧.೨೦೨೦ರಂದು ಸಲ್ಲಿಸಿರುವ ಪ್ರಸ್ತಾವ ಕುರಿತು.

ನಿರ್ಣಯ : ಈ ಕುರಿತಂತೆ ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

೨೦೫.೦೫ ದಿನಾಂಕ ೦೧.೧೧.೨೦೨೦ರಂದು ಬೆಂಗಳೂರಿನ ವಿಧಾನಸೌಧದಲ್ಲಿ ಆಯೋಜಿಸಲಾಗಿದ್ದ ಕುವೆಂಪು ಸಮಗ್ರ ಸಾಹಿತ್ಯ ಸರಣಿ ಪುಸ್ತಕಗಳು ಮತ್ತು ಡಿಜಿಟಲ್ ಆವೃತ್ತಿ ಬಿಡುಗಡೆ ಸಮಾರಂಭ ಕುರಿತು.

**ನಿರ್ಣಯ :** ೧. ದಿನಾಂಕ ೦೧.೧೧.೨೦೨೦ರಂದು ಬೆಂಗಳೂರಿನ ವಿಧಾನಸೌಧದಲ್ಲಿ ಆಯೋಜಿಸಲಾಗಿದ್ದ ಕುವೆಂಪು ಸಮಗ್ರ ಸಾಹಿತ್ಯ ಸರಣಿ ಪುಸ್ತಕಗಳು ಮತ್ತು ಡಿಜಿಟಲ್ ಆವೃತ್ತಿ ಬಿಡುಗಡೆ ಸಮಾರಂಭದ ಬಗ್ಗೆ ಸಭೆ ಅಭಿನಂದನೆ ವ್ಯಕ್ತಪಡಿಸಿತು.

೨. ವಿಶ್ವವಿದ್ಯಾಲಯದ ೨೮ನೇ ನುಡಿಹಬ್ಬದ ನಾಡೋಜ ಗೌರವ ಪದವಿಗಳಿಗೆ ಭಾಜನರಾದ ಸಾಧಕರನ್ನು ಸಭೆ ಅಭಿನಂದಿಸಿತು.

ಕುಲಸಚಿವರ ವಂದನೆಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಸಚಿವರು
ಪದನಿಮಿತ್ತ ಕಾರ್ಯದರ್ಶಿ

ಕುಲಪತಿಗಳು
ಅಧ್ಯಕ್ಷರು